ವಸುಮತಿ ಉಡುಪ



# ಮೆಟ್ಟುಗತ್ತಿ

ಈಗಿನ ಜಮಾನಾದಲ್ಲಿ ಮೆಟ್ಟುಗತ್ತಿಯಲ್ಲಿ ತರಕಾರಿ ಹೆಚ್ಚುವವರು ಇದ್ದಾರೆಯೇ? ಇದ್ದರೆ ಇರಬಹುದು ಹಳ್ಳಿಗಳ ಕಡೆ. ಪೇಟೆಯ ಹೆಮ್ಮಕ್ಕಳ ಕೈಲಿ ಚಾಕುವೇ ಶಕ್ತ್ಯಾಯುಧ. ಅಡುಗೆಮನೆಯಲ್ಲಿ ತರಹೇವಾರಿ ಸೈಜುಗಳ ಚಾಕುಗಳನ್ನಿಟ್ಟುಕೊಂಡು ಚಕ ಚಕ ಚಕ ಎಂದು ತರಕಾರಿಯ ಸಿಪ್ಪೆ ಸುಲಿದು ಹೋಳು ಮಾಡುವವರ ಕುರಿತು ಇವತ್ತಿಗೂ ನನಗೊಂದು ಬೆರಗಿದೆ. ಇಂತಾ ಕೈ ಚಳಕ ನನ್ನಿಂದ ಸಾಧ್ಯವಿಲ್ಲ ಎನ್ನುವ ಕುರಿತು ಕೀಳರಿಮೆಯೋ, ವಿಷಾದವೋ ಹೇಳಲು ಬಾರದ ಏನೋ ಒಂದಿದೆ. ದಶಕಗಳ ಹಿಂದೆ ಮಲೆನಾಡಿನ ಹಳ್ಳಿಯಿಂದ ಶಿವಮೊಗ್ಗ ಪೇಟೆಗೆ ಬಂದಾಗ ಹೊಸ ಸಂಸಾರಕ್ಕೆ ಅತ್ಯಗತ್ಯವೆಂದು ಕೊಂಡು ತಂದ ಸಾಮಗ್ರಿಗಳಲ್ಲಿ ಮೆಟ್ಟುಗತ್ತಿ ಕೂಡಾ ಒಂದು. ಮತ್ತು ಈ ಮೆಟ್ಟುಗತ್ತಿ ಮೊದಲ ನೋಟದಲ್ಲೇ ನನ್ನಿಂದ ನಪಾಸಾಗಿತ್ತು. ಆದರೆ ಅನಿವಾರ್ಯ. ಪೇಟೆ ಊರಲ್ಲಿ ಸಿಗುವುದೆಲ್ಲಾ ಇಂತಾದ್ದೇ ಸಾಮಗ್ರಿಗಳು. ನೆಟ್ಟಗೆ ಒಂದು ಪಾದ ಊರಿ ಕೂತುಕೊಳ್ಳಲು ಸಾಧ್ಯವಾಗದಷ್ಟು ಕಿರಿದಾದ ಹಲಗೆಗೆ ಅಳವಡಿಸಿದ ಕತ್ತಿ. ನಮ್ಮತ್ತ ಕಡೆಯ ಭಾಷೆಯಲ್ಲಿ ಹೇಳುವುದಾದರೆ ಬಡ್ಡು ಕತ್ತಿ. ಕತ್ತಿಯ ಮೇಲ್ತುದಿಯಲ್ಲಿ ಅಳವಡಿಸಿದ ಕಾಯಿ ತುರಿಯುವ ವ್ಯವಸ್ಥೆ. ಋಷಿಗಳು ಒಂಟಿಕಾಲಲ್ಲಿ ನಿಂತು ತಪಸ್ಸು ಮಾಡುತ್ತಿದ್ದ ಹೇಳಿಕೆಯಂತೆ ಒಂಟಿ ಕಾಲನ್ನು ಹಲಗೆಯ ಮೇಲಿಟ್ಟುಕೊಂಡು ಕೂತು ತರಕಾರಿ ಹೆಚ್ಚಬೇಕಾದ, ಕಾಯಿ ತುರಿಯಬೇಕಾದ